# ವಚನಗಳಲ್ಲಿ ಶರಣರ ಕಾಯಕನಿಷ್ಠೆ

ಡಾ. ವಿನೋದಾ*

ಕಾಯಕ ಎಂಬ ಮಾತು ಶರಣರು ವಿಚಾರ ಪ್ರಪಂಚಕ್ಕೆ ಕೊಟ್ಟ ವಿಶಿಷ್ಟ ಕಾಣಿಕೆ. ಈ ಮಾತಿನಲ್ಲಿ ಅವರು ಕಂಡಿರುವ ಆದರ್ಶ ಮತ್ತು ಅರ್ಥ ವ್ಯಾಪ್ತಿ ಇಡೀ ವಿಶ್ವವನ್ನೇ ಒಳಗೊಳ್ಳಬಲ್ಲಂತಹುದು. ಪ್ರತಿಯೊಬ್ಬ ಜೀವಿಯೂ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಲೇ ಇರಬೇಕು. 'ಕಾಯಕ' ಎಂಬ ಪದ ಕೇವಲ ವೃತ್ತಿ ಅಥವಾ ಉದ್ಯೋಗಕ್ಕೆ ಸೀಮಿತವಾದದ್ದಲ್ಲ. ಏಕಾಗ್ರ ಚಿತ್ತದಿಂದ, ತಲ್ಲೀನತೆಯಿಂದ ತನ್ನ ಸರ್ವಶಕ್ತಿಗಳನ್ನು ಅನುಸಂಧಾನ ಮಾಡಿ ಕೈಂಕರ್ಯ ಹಾಗೂ ಸಮರ್ಪಣ ಮನೋಭಾವದಿಂದ ಮಾಡುವ ಕಾರ್ಯವೇ ಕಾಯಕ. 'ಅಸಿಯಾಗಲೀ, ಮಸಿಯಾಗಲೀ, ಕೃಷಿಯಾಗಲೀ, ವಾಣಿಜ್ಯ ಮುಂತಾದ ಕೃಷಿಯ ಮಾಡುವಲ್ಲಿ ಪಶುಪತಿಗೆಂದೇ ಪ್ರಾಮಾಣಿಕಿ' – ಎಂಬ ಕಾಯಕದ ಶರಣ ಮೋಳಿಗೆ ಮಾರಯ್ಯನ ನುಡಿ ಇದಕ್ಕೆ ಪ್ರಮಾಣವಾದ ವಾಕ್ಯ. ಕಾಯಕ ಎನ್ನುವುದು ವ್ಯಕ್ತಿಶೀಲಕ್ಕೂ, ಸಾಮಾಜಿಕ ಸಂಬಂಧ ಹಾಗೂ ಅಧ್ಯಾತ್ಮಿಕ ಅರ್ಥಕ್ಕೂ ಬರುತ್ತದೆ. ಆರ್ಥಿಕ ನೀತಿಯವರು ಕೂಡ ಈ ಮಾತನ್ನು ಹೇಳಲೇಬೇಕಾಗುತ್ತದೆ. ಪ್ರತಿಯೊಬ್ಬ ಜೀವಿಯೂ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಲೇ ಇರಬೇಕು. ಕೆಲಸವನ್ನು ಮಾಡದವನಿಗೆ, ಇನ್ನೊಬ್ಬರ ದುಡಿಮೆಯನ್ನು ಕುಳಿತು ತಿನ್ನುವ ಅಧಿಕಾರವಿಲ್ಲ ದುಡಿಯಲಾರದ ಹೇಡಿಯ ವೈರಾಗ್ಯ, ನಿಜವಾದ ವೈರಾಗ್ಯ ಎನಿಸದು:

ಕಾಯಕಕಾರದೆ ಮೈಸೋಂಬ ತನದಿಂದೆ
ಬೇರೆ ಕೂಳ ಗಳಿಸಲಾರದೆ ಹಸಿದಿರ್ದರಯ್ಯ!
ಒಡಲ ಸೀರೆಯ ಗಳಿಸಲಾರದೆ
ಕಚ್ಚುಟುವ ಕಟ್ಟಿಕೊಂಡಿಪ್ಪರಯ್ಯ!
ಮೀಯಲು ಎಣ್ಣೆಯ ಗಳಿಸಲಾರದೆ
ಮಂಡೆ ಬೋಳಾಗಿಪ್ಪರಯ್ಯ
ದಿಟದಿಂದ ಬಿಡಿಸಲರಿಯದೆ ಸಂಸಾರದ ಶಠೆಯನವಧರಿಸಿ
ಕೊಂಡಿಪ್ಪವರಿಗೆ ನಾನಂಜುವೆನಯ್ಯ ಸಕಲೇಶ್ವರ

ಎಂದು ಸಕಲೇಶ್ವರ ಮಾದರಸ ವೈರಾಗ್ಯದ ಸೋಗನ್ನು ಹಾಕಿ ದುಡಿಯಲಾರದ ಸೋಮಾರಿಗಳನ್ನು ಖಂಡಿಸುತ್ತಾನೆ.

ಸಂಕಲ್ಪದ ಸ್ಥೂಲ ಅಭಿವ್ಯಕ್ತಿಯೇ ಕರ್ಮ. ಜಡ ಚೈತನ್ಯಗಳ ಅಂತರ ಕರ್ಮದಿಂದ ಸಿದ್ಧವಾಗುತ್ತದೆ. ಸೂರ್ಯನಲ್ಲಿ ಬೆಳಕು ಮತ್ತು ಶಾಖಗಳಿರುವಂತೆ ಜೀವನದಲ್ಲಿ ಕರ್ಮ ಅಂತರ್ಗತವಾಗಿದೆ. ಅದು ನಿಸರ್ಗದ ಧರ್ಮ, ಜೀವನದ ಮರ್ಮ. ಮಾನಸಿಕ ಹಾಗೂ ಬೌದ್ಧಿಕ ಶಕ್ತಿಗಳನ್ನು ಅಭಿವ್ಯಕ್ತಗೊಳಿಸುವಂತೆಯೇ ಆತ್ಮವನ್ನು ಜಾಗೃತಗೊಳಿಸುವ ಉಪಾಯವೇ ಕರ್ಮ. ಕರ್ಮಕ್ಕಾಗಿ ಕರ್ಮವೇ ಹೊರತು ಅದರ ಗುರಿ ಹಣವಲ್ಲ, ಕೀರ್ತಿಯಲ್ಲ, ಕಾಮನೆಯಲ್ಲವೆಂದು ಸ್ವಾಮಿ ವಿವೇಕಾನಂದರು ಸ್ಪಷ್ಟಪಡಿಸಿದ್ದಾರೆ. ಅದು ಮಾನವನ ದೈಹಿಕ ಹಾಗೂ ಆತ್ಮಶಕ್ತಿಯ ಸಂಕೇತವೂ ಹೌದು. ಕರ್ಮವೇ ತಪಸ್ಸು, ಯಜ್ಞ ಎಂದು ಹೇಳುವುದುಂಟು. ಭಗವದಗೀತೆಯಲ್ಲಿ ನಿರೂಪಣೆಗೊಂಡಿರುವ ಕರ್ಮಯೋಗದ ಸ್ವರೂಪವಿದು. ಶರಣರ ಕಾಯಕಯೋಗ ಇದಕ್ಕಿಂತಲೂ ಹೆಚ್ಚು ವ್ಯಾಪಕವೆಂಬುದನ್ನು ಮುಂದಿನ ಚರ್ಚೆಯಿಂದ ಅರಿಯಬಹುದು.

ಸಮಾಜ ಸ್ವಯಂಪೂರ್ಣವಾಗಬೇಕಾದರೆ ಮತ್ತು ಸುಖಮಯವಾಗಬೇಕಾದರೆ ಎಲ್ಲರೂ ತಮ್ಮ ತಮ್ಮ ವೃತ್ತಿಗಳನ್ನು ಮಾಡಬೇಕು; ಕಾಯಕದ ಮಹತ್ವವನ್ನು ಅರಿಯಬೇಕು – ಎಂದು ಶರಣರು ಒತ್ತಿ ಹೇಳಿದ್ದಾರೆ. ಇನ್ನೊಬ್ಬರ ಹಂಗಿನಲ್ಲಿ ಬಾಳುವ ಜೀವನ ಒಂದು ಜೀವನವೇ ಅಲ್ಲ. "ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆ" ಎನ್ನುತ್ತಾನೆ ಬಸವಣ್ಣ. ಇನ್ನೊಬ್ಬರ ಮನೆಗೆ ಹೋಗಿ ಉದರವನ್ನು ಹೊರೆಯುವವನು ಭಕ್ತನಾಗಲೀ, ಗುರುವಾಗಲೀ, ಜಂಗಮವಾಗಲೀ ಅವನನ್ನು ತೀವ್ರವಾಗಿ ತಿರಸ್ಕರಿಸಿದ್ದಾರೆ ಶರಣರು.

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ;
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲಹರಿವುದು
ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶಹರಿವುದು
ಇದು ಚೆನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗದ ಅರಿವು

ಎಂದು ನುಲಿಯ ಚಂದಯ್ಯ ಹೇಳುತ್ತಾನೆ. ಈತ ಹಗ್ಗವನ್ನು ಹೊಸೆಯುವ ಕಾಯಕವನ್ನು ಕೈಗೊಂಡಿದ್ದವನು. ಅದನ್ನು ನಡೆಸುತ್ತಲೇ ಸಾಧನೆಯ ಮಾರ್ಗದಲ್ಲಿ ಮುಂದುವರಿದವನು. ಹಾಗೆಯೇ ಮಡಿವಾಳ ಮಾಚಯ್ಯ, ಮೇದಾರ

* ಸಹಾಯಕ ಪ್ರಾಧ್ಯಾಪಕರು ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಕೃಷ್ಣಮೂರ್ತಿಪುರಂ, ಮೈಸೂರು 560 004



Scanned with CamScanner

ಕೇತಯ್ಯ, ಹಡಪದ ಅಪ್ಪಣ್ಣ, ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಸುಂಕದ ಬಕ್ಕಣ್ಣ, ಮಾದಾರ ಚೆನ್ನಯ್ಯ, ತಳವಾರ ಕಾಮಿದೇವ, ಗಾಣದ ಕಣ್ಣಪ್ಪ, ವೈದ್ಯ ಸಂಗಣ್ಣ, ಮೋಳಿಗೆ ಮಾರಯ್ಯ ಈ ಮುಂತಾದವರನ್ನು ನೋಡಬಹುದು. ಅವರ ಹೆಸರಿನ ಹಿಂದಿರುವ ಮಾತುಗಳೇ ಅವರು ಕೈಗೊಂಡ ಕಾಯಕವನ್ನು ಸೂಚಿಸುತ್ತವೆ. ದನ ಕಾಯುವುದು, ದೋಣಿ ನಡೆಸುವುದು, ಬಟ್ಟೆ ಒಗೆಯುವುದು, ಗಾಣ ನಡೆಸುವುದು, ಮೆಟ್ಟು ಹೊಲಿಯುವುದು ಇವೇ ಮೊದಲಾದ ಅನೇಕ ವೃತ್ತಿಗಳಲ್ಲಿದ್ದ ಶರಣರು ಅನುಭವ ಮಂಟಪಕ್ಕೆ ಬಂದಾಗ ಬಸವಣ್ಣನಿಗೆ ಸರಿಸಮವಾಗಿ ಕುಳಿತು ಅಧ್ಯಾತ್ಮಿಕ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಇಂದು ಸಂಪೂರ್ಣವಾಗಿ ಸಾಧ್ಯವಾಗದಂತಹ ಆ ಪರಿವರ್ತನೆಯನ್ನು ಬಸವಣ್ಣ ಆ ಕಾಲದಲ್ಲಿಯೇ ಸಾಧಿಸಿದ್ದರು.

ಅನುಭವ ಮಂಟಪ ಅನುಭಾವಿಗಳ ಕೂಟವಾಗಿತ್ತು. ಅಲ್ಲಿ ನಡೆಯುತ್ತಿದ್ದುದು ಶಾಸ್ತ್ರದಲ್ಲಿ ಹೇಳಿದ ಸಂಪ್ರದಾಯದ ಮಾತುಗಳ ಜಿಜ್ಞಾಸೆಯಲ್ಲ. ತಮ್ಮ ಸಾಧನೆಯ ಮಾರ್ಗದಲ್ಲಿ ತಲೆದೋರಿದ ಸಂದೇಹಗಳನ್ನು ಮೂಡಿದ ಸಮಸ್ಯೆಗಳನ್ನು ಅನುಭವವನ್ನೇ ಆಧಾರವಾಗಿಟ್ಟುಕೊಂಡು ಚರ್ಚಿಸುತ್ತಿದ್ದರು. ಒಮ್ಮೆ ಅನುಭವ ಮಂಟಪದಲ್ಲಿ ಕಾಯಕವನ್ನು ಕುರಿತ ಒಂದು ಸಮಸ್ಯೆ ಒಡಮೂಡುತ್ತದೆ. ಅದಕ್ಕೆ ಕಾರಣನಾದವನು ಆಯ್ದಕ್ಕಿ ಮಾರಯ್ಯ. ಆತ ಅನುಭಾವ ಮಂಟಪಕ್ಕೆ ಬಂದು ಅಗ್ರಪೀಠದಲ್ಲಿ ಮಂಡಿಸಿದ್ದ ಪ್ರಭುದೇವನನ್ನು ಕುರಿತು ಕೇಳುತ್ತಾನೆ. "ಕಾಯಕವೇ ಕೈಲಾಸ" ಎಂದು ಹೇಳಿರುವುದರಿಂದ, ಗುರು, ಲಿಂಗ, ಜಂಗಮ ಈ ಮೊದಲಾದವುಗಳ ಹಂಗಾದರು ಏತಕ್ಕೆ?

ಕಾಯಕದಲ್ಲಿ ನಿರತನಾದರೆ
ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗುಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತಾದರೂ ಕಾಯಕದೊಳಗೂ

ಎನ್ನುತ್ತಾನೆ. ಕಾಯಕವೊಂದರಿಂದಲೇ ಎಲ್ಲವೂ ಸಿದ್ಧಿಸುವ ಹಾಗಿದ್ದರೇ, ತ್ರಿವಿಧ ದಾಸೋಹಗಳ ತೊಡಕೇಕೆ? ಎಂಬುದು ಆತನ ಸಂದೇಹ. 'ಕಾಯಕ' – ಎಂಬ ಮಾತಿನ ಅರ್ಥವ್ಯಾಪ್ತಿಯನ್ನು ಮರೆತಾಗ ಅದಕ್ಕೆ ಹೊಟ್ಟೆಪಾಡಿನ ಉದ್ಯೋಗವೆಂದು ಅರ್ಥವೂ ಬರುವುದರಿಂದ ಈ ಸಂದೇಹ ತಲೆದೋರುವುದು ಸಹಜ. ಪ್ರತಿಯೊಬ್ಬರು ತಮ್ಮ ಜೀವನ ನಿರ್ವಹಣೆಗಾಗಿ ಉದ್ಯೋಗ ಮಾಡುವುದು ಅನಿವಾರ್ಯ. ಆದರೆ 'ಕಾಯಕ' ಎಂಬುದರ ಅರ್ಥ ಅಷ್ಟೇ ಅಲ್ಲ. ಇನ್ನೂ ವ್ಯಾಪಕವಾದದ್ದು. ತಾನು ಕೈಗೊಂಡ ಉದ್ಯೋಗ ಸಮಾಜಕ್ಕೆ ಹಾನಿಕರವಾಗಿರದೇ ಸಮಾಜದ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು. ಅದರ ಫಲ ತನಗೆ ಮಾತ್ರವೇ ಅಲ್ಲದೆ, ಸಮಾಜಕ್ಕೂ ದೊರೆಯಬೇಕು. ಆ ಮೂಲಕ ತನ್ನ ಸ್ವಾರ್ಥ ಅಳಿದು ವಿಶ್ವಶಕ್ತಿ ಹೆಚ್ಚುಹೆಚ್ಚಾಗಿ ಅಂತರಂಗದೊಳಗೆ ಇಳಿದು ಬರಬೇಕು. ಈ ನಿರ್ಲಿಪ್ತ ಸ್ಥಿತಿಯಿಂದ ಮಾಡಿದ ಕೆಲಸ 'ಕಾಯಕ' ವಾಗುತ್ತದೆ. ಈ ನಿಲುವನ್ನು ಪಡೆಯಲು ಬಹಿರಂಗದ ಆಚರಣೆಗಳು ಅವಶ್ಯಕ. ತ್ರಿವಿಧ ದಾಸೋಹಗಳು ಅವಶ್ಯಕ ಎನ್ನುತ್ತಾನೆ ಅಲ್ಲಪ್ರಭು.

ಮಾಡುವ ಮಾಟದಿಂದಲೇ ಬೇರೊಂದನರಿಯಬೇಕು
ಅರಿವಿಂಗೆ ನೆಮ್ಮುಗೆ ಒಡಗೂಡಬೇಕು
ಅರಿವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ
ಬಯಲ ಭ್ರಮೆಯ ಕಳೆದು
ನಮ್ಮ ಗುಹೇಶ್ವರ ಲಿಂಗದಲ್ಲಿ
ನಿಜಪದವನ್ನೈವುದು ಮಾರಯ್ಯ

ಈ ಮಾತು ಮಾರಯ್ಯನ ಮನಸ್ಸಿಗೆ ಒಪ್ಪಿಗೆಯಾಗುತ್ತದೆ.ಅದನ್ನೇ ಮನನ ಮಾಡುತ್ತಾ, ಧ್ಯಾನದಲ್ಲಿ ಮಗ್ನನಾಗಿ ತನ್ನ ಅಂದಿನ ಕಾಯಕವನ್ನೇ ಮರೆತುಬಿಡುತ್ತಾನೆ, ಆಗ ಅಲ್ಲಿಗೆ ಬರುತ್ತಾಳೆ ಅವನ ಪತ್ನಿ ಲಕ್ಕಮ್ಮ ಕಾಯಕ ತಪ್ಪಬಾರದೆಂದು ಎಚ್ಚರಿಸಿ ಅವನನ್ನು ಕಳುಹಿಸಿಕೊಡುತ್ತಾಳೆ, ಮಾರಯ್ಯ ತನಗೆ ಅಗತ್ಯವಾದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿಯನ್ನು ಆಯ್ದು ಕಟ್ಟಿಕೊಂಡು ಬರುತ್ತಾನೆ. ಲಕ್ಕಮ್ಮ ಇದನ್ನು ಕಂಡು ಇಷ್ಟೊಂದು ಅಕ್ಕಿಯ ಆಸೆ ತರವಲ್ಲವೆಂದು ಸೂಚಿಸುತ್ತಾಳೆ.

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗೆ ಉಂಟೆ ಅಯ್ಯ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೆ ಅಯ್ಯ?
ಈಸಕ್ಕಿ ಆಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ

Scanned with CamScanner

ಈಸಕ್ಕಿ ಆಸೆಯನ್ನು ಆ ಶಿವನು ಮೆಚ್ಚಲಾರ ಎನ್ನುವ ಲಕ್ಕಮ್ಮನ ಮಾತು ಅಂದಿನ ಕಾಯಕ ತತ್ವದ ಹಿಂದಿನ ಸದುದ್ದೇಶವನ್ನು ಮನಗಾಣಿಸುತ್ತದೆ. ತನಗೆ ಅವಶ್ಯಕವಾದಷ್ಟನ್ನು ಮಾತ್ರ ಪ್ರತಿಯೊಬ್ಬನು ತೆಗೆದುಕೊಂಡರೆ ಲೋಕದಲ್ಲಿ ಯಾರಿಗೂ ಯಾವ ಅವಶ್ಯಕತೆಗಳಿಗೂ ಕೊರತೆ ಬರುವುದಿಲ್ಲ. ಸೃಷ್ಟಿಕರ್ತನ ನಿಯಮವೇ ಅದು. ಮಹಾತ್ಮಗಾಂಧೀಜಿಯವರು "Nature produces enough for our wants from day to day; and if everybody took enough for himself and nothing more there would be no pauperism in this world, there would no man dying of starvation" ಎಂದು ಹೇಳಿರುವ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತಮ್ಮ ಅವಶ್ಯಕತೆಗೆ ಅಗತ್ಯವಾದಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದುದ್ದು ನಿಸ್ವಾರ್ಥತೆಯಿಂದ ಬೇರೆಯವರಿಗೆ ನೀಡಿದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮರಸ್ಯ ಮೂಡುತ್ತದೆ. ವ್ಯಕ್ತಿಯ ಅಂತರಂಗ ವಿಕಾಸಗೊಂಡು ಅವನ ಸಾಧನೆ ಪೂರ್ಣಗೊಳ್ಳಲು ಸಹಾಯವಾಗುತ್ತದೆ. ಇಂತಹ ಆದರ್ಶವನ್ನು ಲಕ್ಕಮ್ಮನಂತಹ ಒಬ್ಬ ಸ್ತ್ರೀ ಪ್ರತಿಪಾದಿಸಿರುವುದನ್ನು ನಾವು ಗಮನಿಸಬೇಕು:

ಮನಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವ
ಸದ್ಭಕ್ತರಿಗೆ ಎತ್ತನೋಡಿದೊಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ

ಎಂದು ಆಕೆ ಮಾರಯ್ಯನಿಗೆ ಹೇಳುತ್ತಾಳೆ; ಮತ್ತು ಅಹಂಕಾರವಳಿದು ತ್ರಿವಿಧ ದಾಸೋಹ ಮಾಡುವುದೇ ಮುಕ್ತಿಯ ಮಾರ್ಗವೆಂದು ಬಸವಾದಿ ಶರಣರನ್ನು ತನ್ನ ಮನೆಗೆ ದಾಸೋಹಕ್ಕಾಗಿ ಬರಮಾಡಿಕೊಂಡು ಸತ್ಕರಿಸುತ್ತಾಳೆ. ಆಗ ಬಸವಣ್ಣನು:

ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು
ಧನ ನೋಡಾ ಬಡವರು, ಘನಮನ ಸಂಪನ್ನರು
ಕೂಡಲಸಂಗನ ಶರಣರು ಕರುಳಿಲ್ಲದ ಕಲಿಗಳು
ಆರಿಗೆ ಉಪಮಿಸಬಹುದು.

ಎಂದು ಹೊಗಳುತ್ತಾನೆ. ಕರುಳಿಲ್ಲದ ಕಲಿಗಳು ಎಂಬ ಮಾತಿನಲ್ಲಿ ಈ ಶರಣ ದಂಪತಿಗಳು ಸತ್ಯ ನಿಷ್ಠೂರರು. ಅಸತ್ಯ ಅನ್ಯಾಯದ ಬಗೆಗೆ ಯಾವುದೇ ದಯೆಯನ್ನು ತೋರದ ನಿಷ್ಠುರವಾದಿಗಳು ಎಂಬ ಅರ್ಥವು ಸತ್ಯದಾರಿಯಲ್ಲಿ ಕಾಯಕ ನಡೆಸುವ ಕಠೋರ ನಿಷ್ಠೆಯನ್ನು ಸೂಚಿಸುತ್ತಿದೆ. ದುರಾಸೆಯಿಂದ ದುರ್ಮಾರ್ಗದಿಂದ ಸಂಪಾದಿಸಿದ ಹಣ, ದುಡಿಯದೇ ಬೆವರು ಸುರಿಸದೇ ಗಳಿಸಿದ ಹಣ ಶಿವನಿಗೆ ಸಲ್ಲುವುದಿಲ್ಲವೆಂದು ನುಲಿಯ ಚಂದಯ್ಯ ಸಾರುತ್ತಾನೆ.

ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕರ್ಪಿತವಲ್ಲದೆ
ದುರಾಶೆಯಿಂದ ಬಂದುದು ಅನರ್ಪಿತ
ಇದು ಕಾರಣ ಸತ್ಯಶುದ್ಧ ಕಾಯಕ ನಿತ್ಯದ್ರವ್ಯವಾದರೆ
ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ

ಎನ್ನುವಲ್ಲಿ ಸತ್ಯಶುದ್ಧ ಕಾಯಕದ ಹೆಚ್ಚುಗಾರಿಕೆ ವಿಶದವಾಗುತ್ತದೆ:

ಕಾಯಕವೆಂದು ಕಾಯುವ ಬಳಲಿಸದೆ,
ತನುಕರಗದೆ ಮನ ನೋಯದೆ,
ಬೇಡಿಕಾಡಿ ಮಾಡುವುದು ದಾಸೋಹವೇ?

ಎಂದು ಶಿವಲೆಂಕ ಮಂಚಣ್ಣ ಪ್ರಶ್ನಿಸುತ್ತಾನೆ. ನಾನು ಮಾಡುವ ಕಾಯಕವೆಲ್ಲಾ ಪರಸೇವೆಗೆ ಮೀಸಲು ಎನ್ನುವ ಬಸವಣ್ಣ ಹೀಗೆ ಹೇಳುತ್ತಾನೆ:

ನಾನು ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು;
ನಾನು ಬೆವಹಾರವ ಮಾಡುವೆನೆಯ್ಯ ಲಿಂಗಾರ್ಚನೆಗೆಂದು;
ನಾನು ಪರಸೇವೆಯ ಮಾದುವೆನೆಯ್ಯ ಜಂಗಮ ದಾಸೋಹಕ್ಕೆಂದು

ಆಧ್ಯಾತ್ಮ ಸಿದ್ಧಿ ಕಾಯಕದ ಗುರಿಯಾದರೂ, ಸಮಾಜದ ಆರ್ಥಿಕ ಸುಸ್ಥಿತಿಯನ್ನು ಕಾಪಾಡುವುದು ಮುಖ್ಯವೆಂದು ಸರ್ವವಿಧಿತವಾಗಿತ್ತು. ಇಂದಿನ ಕೈಗಾರಿಕ ಯುಗದ ಅನೇಕ ಸಾಮಾಜಿಕ ಕ್ಷೋಭೆಗಳಿಗೆ ದುರಾಸೆಯೇ ಕಾರಣವಾಗಿದ್ದು, ಕೆಲಸ ಮಾಡದೆ ಸುಲಭವಾಗಿ ಹಣ ಮಾಡುವ ದುರ್ಮಾಗಳ ಹುಡುಕಾಟದಲ್ಲೇ ನಿರತರಾಗಿರುವವರ ಮಧ್ಯೆ ಕಾಯಕದ ನಿಜ ಅರ್ಥದಲ್ಲಿ ಶ್ರಮದ ಬೆಲೆಯನ್ನು ವಿಭೂತಿಯಾಗಿ ಪರಿಭಾವಿಸಿದ ಶರಣರ ಸಾಧನೆ ನಿಜಕ್ಕೂ ಅಸಾಮಾನ್ಯವಾದದ್ದು. ಸರ್ವಕಾಲಕ್ಕೂ ಪ್ರಸ್ತುತವಾದದ್ದು. ಹೀಗೆ ಶರಣರು ಎಲ್ಲರಿಗೂ ಉದ್ಧಾರದ ಮಾರ್ಗಗಳನ್ನು ತೋರಿಸಬಲ್ಲ



Scanned with CamScanner

ಪೂರ್ಣದೃಷ್ಟಿಯ ಆದರ್ಶ ಸಮಾಜದ ಚಿತ್ರವನ್ನು ಕಂಡರು. ಇಲ್ಲಿ ಮನುಷ್ಯ ಚೆನ್ನಾಗಿ ಬದುಕಬೇಕು, ಚೆನ್ನಾಗಿ ಬಾಳಬೇಕು. ಆದರೆ ಈ ಎಲ್ಲಾ ಬದುಕು ವ್ಯಕ್ತಿನಿಷ್ಠೆಯಿಂದಲೇ ಸಮಷ್ಟಿ ಪ್ರಜ್ಞೆಯಾಗಿ ಸಮಾಜವನ್ನು ಸದೃಢಗೊಳಿಸಬೇಕು. ಕಾಯಕದಲ್ಲಿ ಮೇಲುಕೀಳೆಂಬುದಿಲ್ಲ. ಮೇಲುಕೀಳೆಂಬುದು ಅದನ್ನು ನಿರ್ವಹಿಸುವ ಮನೋಧರ್ಮದಲ್ಲಿದೆ. ಎಲ್ಲ ರೀತಿಯ ಉದ್ಯೋಗಗಳಿಂದ ಸಮಾಜ ಸ್ವಯಂಪೂರ್ಣವಾಗಬೇಕು; ಸಮೃದ್ಧವಾಗಬೇಕು. ವ್ಯಕ್ತಿ ಎಲ್ಲಿಯೇ ಇರಲಿ ಬಡವ ಬಲ್ಲಿದನೆಂಬ ಭೇದವಿಲ್ಲದೆ ಸ್ತ್ರೀ ಪುರುಷರೆಂಬ ತಾರತಮ್ಯವಿಲ್ಲದೆ ಎಲ್ಲರೂ ಜೀವನದ ಗುರಿಯನ್ನು ತಮ್ಮದೇ ಮಾರ್ಗದಲ್ಲಿ ಸಾಧಿಸುವ ಸಮಾಜ ಸರ್ವಸಮಾನತೆಯನ್ನು ಸಾಧಿಸುತ್ತದೆ ಎಂಬುದನ್ನು ಶರಣರು ತಮ್ಮ ಕಾಯಕನಿಷ್ಠೆಯನ್ನು ಮೆರೆಯುತ್ತಲೇ ಇಡೀ ವಿಶ್ವಕ್ಕೆ ಸಾರಿದರು ಮತ್ತು ಅದನ್ನು ಸಾಧಿಸಿ ತೋರಿಸಿದರು.

**ಪರಾಮರ್ಶನ ಗ್ರಂಥಗಳು**


1. ಬಸವ ದರ್ಶನ, ಪ್ರೊ. ದೇಜಗೌ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2004.
2. ವಚನ ಸಾಹಿತ್ಯ, ಸಂಪುಟ–5, ಡಾ. ಎಂ. ಚಿದಾನಂದಮೂರ್ತಿ, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. 2000.
3. ಶರಣತತ್ವ ಚಿಂತನ, ಸಂ. ಡಾ. ಎ.ಎಲ್. ಶಿವರುದ್ರಪ್ಪ, ಶರಣ ಸಾಹಿತ್ಯ ಪರಿಷತ್ತು, ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು. 1998.
4. ಶರಣರ ಅನುಭಾವ ಸಾಹಿತ್ಯ, ಡಾ. ಎಚ್.ತಿಪ್ಪೇರುದ್ರಸ್ವಾಮಿ, ಡಿವಿಕೆ ಮೂರ್ತಿ, ಪ್ರಕಾಶಕರು, ಮೈಸೂರು. 1998.
5. ವಿಮರ್ಶೆಯ ದಾರಿಯಲ್ಲಿ, ಲೇ. ಸುಮತೀಂದ್ರ ನಾಡಿಗ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.
6. ಕನ್ನಡ ಸಾಹಿತ್ಯ ಸಂಗಾತಿ, ಯೋ. ಸಂ. ಡಾ. ಬರಗೂರು ರಾಮಚಂದ್ರಪ್ಪ. ಸಂ. ಡಾ. ಬಸವರಾಜ ಕಲ್ಗುಡಿ, ಪ್ರೊ. ಬಿ. ಶ್ರೀನಿವಾಸರಾಜು, ಡಾ. ಎಂ.ಎಸ್. ಲಕ್ಕಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.


Scanned with CamScanner